ದಿ.26-04-2024 ರಂದು ಆರೊಪಿಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀಸಾಲು ಮಾಡಲು ನ್ಯಾಯಾಲಯವು ಆರೋಪಿಪರ ವಕೀಲರಿಗೆ ಅನುಮತಿ ನೀಡಲಾಯಿತು.

ದಿ.29-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಆರೋಪಿ ಪರ ಶ್ರೀ ಎಲ್ ಯು ವಕೀಲರಿಂದ.

2022 ರಿಂದ ನಾನು ಮೋಬೈಲ್ ಫಾರಿನ್ ಸಿಕ್ ನಲ್ಲಿ ವೆಜ್ಞಾನಿಕ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಇಲ್ಲಿಯವರೆಗೆ ನಾನು ಒಟ್ಟು 125 ಪ್ರಕರಣಗಳಲ್ಲಿ ಪರೀಕ್ಷೆ ಮಾಡಿ ವರದಿ ನೀಡಿರುತ್ತೇನೆ. ಫಾರಿನ್ ಸಿಕ್ ಮೆಥಡ್ ಅನ್ವಯವಾಗಿ ನಾನು ಪರೀಕ್ಷೆ ಮಾಡಿ ವರದಿ ನೀಡಿರುತ್ತೇನೆ.

ವಿಡಿಯೋ ಮತ್ತು ಆಡಿಯೋಗಳನ್ನು ಎಡಿಟ್ ಮಾಡಬಹುದು ಎಂಬ ಪ್ರಶ್ನೆಗೆ ಸಾಕ್ಷಿ- ಪರೀಕ್ಷೆ ಮಾಡಲು ಬೇರೆ ವಿಭಾಗ ಇದೆ ಎಂದು ನುಡಿದಿರುತ್ತಾರೆ.

ಸಾಮಾನ್ಯವಾಗಿ ವಿಡಿಯೋ ಮತ್ತು ಆಡಿಯೋಗಳನ್ನು ಕೆಲವು ಎಡಿಟ್ ಮಾಡುವ ಸಾಧ್ಯತೆ ಇರುತ್ತದೆ ಎನ್ನುವುದು ನಿಜ.

ಸದರಿ ವಿಡಿಯೋದಲ್ಲಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ವಿಷಯಗಳ ಸತ್ಯಾಸತ್ಯ ತಿಳಿಯಲು ಪ್ರತ್ಯೇಕ ವಿಭಾಗ ಇದೆ ಎನ್ನುವುದು ನಿಜ. ಈ ಪ್ರಕರಣದಲ್ಲಿ ನನ್ನ ಮುಂದೆ ಹಾಜರುಪಡಿಸಿದ ವಿಡಿಯೋಗಳನ್ನು ಸಂಬಂಧಪಟ್ಟ ವಿಭಾಗಕ್ಕೆ ಕಳುಹಿಸಿದ್ದು, ಆ ಪ್ರಕಾರ ಅವರು ವರದಿಯನ್ನು ಸಹಿತ ಕಳುಹಿಸಿರುತ್ತಾರೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಅಧಿಕಾರಿಗಳು ಕೊಟ್ಟ ವರದಿ ನಮ್ಮ ಬಳಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ನಾವು ಆರ್ಟಿಕಲ್ಸನ್ನು ಮತ್ತು ವರದಿಯನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗೆ ಕಳುಹಿಸಿರುತ್ತೇವೆ. ಅವರು ಪರಿಶೀಲನೆ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದ ಚಾಸಾ-25

ರವರಿಗೆ ಕಳುಹಿಸಲಾಗಿದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ.

ಆರ್ಟಿಕಲ್ ಪಡೆದ ನಂತರ ನಾವು ಯಾವ ನಿಯಮ ಅಳವಡಿಸಿ ಪರೀಕ್ಷೆ ಮಾಡಲಾಗಿದೆ ಎಂದು ನಮ್ಮ ವರದಿಯಲ್ಲಿ ನಮೂದು ಮಾಡಲಾಗಿರುತ್ತದೆಯೇ ವಿನಹ ಸದರಿ ವಿಷಯವನ್ನು ನಾವು ತನಿಖಾಧಿಕಾರಿಗೆ ನೀಡಿರುವುದಿಲ್ಲ.

ವಿವಾದಿತ ಧ್ವನಿ ಮತ್ತು ಒಪ್ಪತಕ್ಕ ಧ್ವನಿ ಸುರಳಿಗಳನ್ನು ಪರಿಶೀಲನೆ ಮಾಢಿ ವರದಿ ಕೊಟ್ಟಿಲ್ಲ , ಕಾರಣ ಅದು ನಮ್ಮ ವಿಭಾಗಕ್ಕೆ ಬರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಸಾಮಾನ್ಯವಾಗಿ ಒಬ್ಬವ್ಯಕ್ತಿಯ ಧ್ವನಿಯನ್ನು ನಾವು ಇಂತಹದ್ದೇ ವ್ಯಕ್ತಿಯಧ್ವನಿ ಎಂದು ಗುರುತಿಸಲು ವಿವಾದಿತ ಧ್ವನಿ ಮತ್ತು ಒಪ್ಪತಕ್ಕ ಧ್ವನಿ ಸುರಳಿ ಪರೀಕ್ಷಿಸಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ವಿಭಾಗಕ್ಕೆ ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಮೂರು ವಿಡಿಯೋಗಳಲ್ಲಿ ಎರಡು ಕಾಣಿಸುತ್ತವೆ ಮತ್ತು ಇನ್ನೊಂದು ಕಾಣಿಸುತ್ತಿಲ್ಲ ಎಂದು ವರದಿ ನೀಡಿದ್ದು , ಇನ್ನೊಂದು ವಿಡಿಯೋ ಯಾವ ಕಾರಣಕ್ಕೆ ಕಾಣುತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ವಿಭಾಗಕ್ಕೆ ಬರುವುದಿಲ್ಲ ಬೇರೆ ವಿಭಾಗಕ್ಕೆ ಬರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ನಮಗೆ ಗೊತ್ತಿರುವುದಿಲ್ಲ.

ನಿಯಮಾನುಸೂರ ಪರೀಕ್ಷೆ ಮಾಡಲು ನಮಗೆ ಅಧಿಕಾರ ಇದ್ದರೂ ಸಹ ಅದನ್ನು ಮುಚ್ಚಿ ಹಾಕುವ ಸಲುವಾಗಿ ಅದು ನಮ್ಮ ವಿಭಾಗಕ್ಕೆ ಬರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಯಮಾವಳಿಗಳನ್ನು ಅನುಸರಿಸಿ ನೀವು ಪರೀಕ್ಷೆ ಮಾಡದೇಯಿರುವುದರಿಂದ ಸದರಿ ಧ್ವನಿಸುರಳಿ ಪರೀಕ್ಷೆ ಮಾಡಲು ನಮ್ಮ ವಿಭಾಗಕ್ಕೆ ಬರುವುದಿಲ್ಲ ಎಂದು ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸದರಿ ಮೋಬೈಲ್ ಮತ್ತು ಸಿಮ್ ಆರೋಪಿ ಖರೀದಿ ಮಾಡಿದ ಬಗ್ಗೆ ನಮಗೆ ಗೊತ್ತಾಗುವುದಿಲ್ಲ, ಇವು ಮೃತ ವ್ಯಕ್ತಿಯವು ಇರುತ್ತವೆ ಎಂದು ತಿಳಿಯಲು ತನಿಖಾಧಿಕಾರಿಯಿಂದ ಯಾವುದೇ ದಾಖಲೆ ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಅಧಿಕಾರಿಗಳು ನಮಗೆ ಎಲ್ಲಾ ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ

ತನಿಖಾಧಿಕಾರಿಗಳು ಕೊಟ್ಟ ದಾಖಲೆಗಳನ್ನು ಪರಿಶೀಲಿನೆ ಮಾಡಿ , ಸದರಿ ಧ್ವನಿ ಸುರಳಿ ಬಗ್ಗೆ ನಾನು ನನ್ನ ವರದಿಯಲ್ಲಿ ನಮೂದು ಮಾಡಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿ

ಆರೋಪಿಗೆ ಆಗದೇಯಿರುವ ವ್ಯಕ್ತಿಗಳು , ಕೇಸಿನ ಫಿರ್ಯಾದಿ , ಚಾಸಾ-1 ಮತ್ತು ಅವರ ಸಂಬಂಧಿಕರು ಸೇರಿ ಸದರಿ ವಿಡಿಯೋ ಮತ್ತು ಆಡಿಯೋ ಸೃಷ್ಟಿಸಿ, ಕಳುಹಿಸಿದವುಗಳನ್ನು ನಾವು ಪರೀಶನೆ ಮಾಡಿ ವರದಿ ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

ಸಾಮಾನ್ಯವಾಗಿ ವಿಡಿಯೋ ಮತ್ತು ಆಡಿಯೋವನ್ನು ಸೃಷ್ಟಿಸುವ ಸಾಧತೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿ – ಇದಕ್ಕೆ ಸಂಬಂಧಪಟ್ಟಂತೆ ಎಕ್ಸಪರ್ಟ್ ರವರನ್ನು ಕೇಳಬೇಕಾಗುತ್ತದೆ ಎಂದು ಉತ್ತರಿಸಿರುತ್ತಾರೆ.

ನಿಪಿ.18 ವರದಿಗೂ ಆರೋಪಿಗೂ ಯಾವುದೇ ರೀತಿಯ ಸಂಬಧವಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರ ಮಾತು ಕೇಳಿ ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ನಾನು ಸಮರ್ಪಕವಾಗಿ ನಿಯಮಾವಳಿಗಳನ್ನು ಅನುಸರಿಸದೇ ಪರೀಕ್ಷೆ ಮಾಡಿ , ಸುಳ್ಳು ವರದಿನೀಡಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.